# ಭೂತಾನಿನ ಸ್ತೂಪಗಳು

ಡೊಚುಲಾ ಪಾಸಿನ ಸುತ್ತ ಸೈಪ್ರಸ್ ಮರಗಳಿವೆ, ಅಲ್ಲದೇ ಹಲವು ತರಹದ ಹೂ ಗಿಡಗಳಿದ್ದು ಬೇಸಿಗೆ ಕಾಲದಲ್ಲಿ ಅಂದರೆ ಫೆಬ್ರವರಿಯ ನಂತರ ಕಾಡು ಹೂಗಳನ್ನೂ ಕಾಣಬಹುದು.

ಚಿತ್ರ – ಲೇಖನ:
**ಗೀತಾ ಕುಂದಾಪುರ**



ಗುಡ್ಡ, ಬೆಟ್ಟ, ಕಣಿವೆ, ಜಲಪಾತಗಳ ನಾಡು ಭೂತಾನ್ ದೇಶ. ಪ್ರವಾಸ ಸಲಹೆಗಾರರಿಂದಲೇ ನಂಬರ್ ಒನ್ ಚಾರಣ ತಾಣವೆಂದು ಗುರುತಿಸಲ್ಪಟ್ಟ ಟೈಗರ್ ನೆಸ್ಟ್ ಇಲ್ಲಿದೆ. ವಿಶ್ವದ ಅತೀ ಸಂತೋಷದ ಜನರಿರುವ ನಾಡೆಂದು ಗುರುತಿಸಿಕೊಂಡು ಹೆಗಲು ತಟ್ಟಿಕೊಳ್ಳುತ್ತಿರುವ ದೇಶವೂ ಹೌದು. ತಿಂಪು, ಪುನಾಕಾ, ಪಾರೊ, ಚಿರಂಗ್, ಚುಕಾ ಭೂತಾನಿನ ದೊಡ್ಡ ನಗರಗಳು. ಪ್ರವಾಸ ಹೊರಟರೆ ನೋಡಲು ಸಾಕಷ್ಟು ಜಾಗಗಳು. ಆದರೆ ನನ್ನ ನೆನಪಿಂಗಳದಲ್ಲಿ 'ಡೊಚುಲಾ ಪಾಸ್ ' ಗೆ ವಿಶೇಷ ಸ್ಥಾನ.

ಭೂತಾನಿನ ಹೊಸ ರಾಜಧಾನಿ 'ತಿಂಪು' ವಿನಿಂದ ಹಳೆಯ ರಾಜಧಾನಿ 'ಪುನಾಕಾ'ದ ಮಧ್ಯೆ ಬರುವ ಬೆಟ್ಟದ ದಾರಿಯಲ್ಲಿದೆ 'ಡೊಚುಲಾ ಪಾಸ್'. ಇಲ್ಲಿಯೇ 108 ಬೌದ್ಧ ಸ್ತೂಪಗಳಿವೆ. ಡೊಚುಲಾ ಪಾಸ್‌ನಿಂದ ಮುಂದೆ ಪೂರ್ವಕ್ಕೆ ಕಡಿದಾದ ಇಳಿಜಾರು ದಾರಿಯಲ್ಲಿ ಸಾಗಿದರೆ ಸಿಗುವುದು 'ಪುನಾಕಾ'. ಡೊಚುಲಾ ಪಾಸ್ ಮತ್ತು ಸ್ತೂಪಗಳು ಪುರಾತನ ಇತಿಹಾಸ ಪ್ರಸಿದ್ಧ ಪ್ರದೇಶವೂ ಅಲ್ಲ, ವಾಸ್ತು ಶಿಲ್ಪಕ್ಕೆ ಹೆಸರುವಾಸಿಯಾಗಿರುವ ಕಟ್ಟಡವಾಗಲೀ, ಶಿಲ್ಪಗಳಾಗಲೀ ಇಲ್ಲಿಲ್ಲ, ಆದರೆ 360 ಡಿಗ್ರಿಯಲ್ಲೂ ಕಾಣ